ಸಾಕ್ಷಿಯನ್ನು ದಿ: 12.12.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ನನ್ನ ಗಂಡನಿಗೆ ಇಬ್ಬರೂ ಸಹೋದರರು ಒಬ್ಬಳು ಸಹೋದರಿ ಇರುತ್ತಾಳೆ. ವಾದಿ ಮತ್ತು 2 ನೇ ಪ್ರತಿವಾದಿ ಅಣ್ಣತಮ್ಮಂದಿರು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಗಂಡ ಎಂದರೆ ಸರಿ. ವಾದಿ ಮತ್ತು 2 ನೇ ಪ್ರತಿವಾದಿಯ ಮಧ್ಯೆ ಸುಮಾರು 30 ವರ್ಷಗಳ ಹಿಂದೆ ಭಾಗವಾಗಿರುತ್ತದೆ ಎಂದರೆ ಗೊತ್ತಿಲ್ಲ. ವಿಭಾಗದ ಪ್ರಕಾರ ನಮ್ಮ ಮನೆಯಲ್ಲಿ ನಾವು ವಾಸವಾಗಿರುತ್ತೇವೆ ಎಂದರೆ ಸರಿ. ಹಳೆಯ ಮನೆಯಲ್ಲಿ 2 ನೇ ಪ್ರತಿವಾದಿಗೆ ಮತ್ತು ವಾದಿಗೆ ಭಾಗ ಇರುತ್ತದೆ ಎಂದರೆ ಗೊತ್ತಿಲ್ಲ. ವಾದಿ ಮದುವೆಯಾದ ನಂತರ ಹಳೆ ಮನೆಯ ಅರ್ಧ ಭಾಗದಲ್ಲಿ ವಾಸವಾಗಿದ್ದರು ಎಂದರೆ ಸರಿ. ವಾದಿಯ ಹೆಂಡತಿಯ ಊರು ಮಹದೇವಪುರ ಎಂದರೆ ಸರಿ. ವಾದಿ ಹಬ್ಬಹರಿದಿನಗಳಲ್ಲಿ ಹಳೆಯ ಮನೆಯಲ್ಲಿ ಬಂದು ವಾಸ ಮಾಡುತ್ತಾರೆಂದರೆ ಸರಿಯಲ್ಲ. ನಮ್ಮ ಕುಲಪದ್ದತಿ ಪ್ರಕಾರ ಕುಟುಂಬದ ಯಜಮಾನರು ಮರಣ ಹೊಂದಿದ ನಂತರ ಅವರ ವಾಸದ ಮನೆಯಲ್ಲಿ ಪಿತೃಪಕ್ಷ ಮಾಡಿ ಎಡೆ ಇರುತ್ತಾರೆಂದರೆ ಸರಿ. ಬೆಂಡರವಾಡಿಯಲ್ಲಿ ವಾದಿಗೆ 6 ಗುಂಟೆ ಜಮೀನಿದ್ದು ಸದರಿ ಜಮೀನಿನ ಉಳುಮೆಗಾಗಿ ಬಂದಾಗ ವಾದಿ ಅವರ ಮನೆಯಲ್ಲಿ ವಾಸ ಮಾಡುತ್ತಾರೆಂದರೆ ಸರಿಯಲ್ಲ. ವಾದಿ ಪ್ರತಿ ಹಬ್ಬದಲ್ಲೂ ಬಂದು ಅವರ ಮನೆಯಲ್ಲಿ ಪೂಜೆ ಪುನಸ್ಕಾರ ಮಾಡುತ್ತಾರೆಂದರೆ ಸರಿಯಲ್ಲ. ಹಳೆ ಮನೆ ಪಕ್ಕದಲ್ಲಿ ವಾದಿಗೆ ಮಂಜೂರಾದ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಆಸ್ತಿ ಸಂಃ 307/311 ಕಲ್ಲುಣಿ ಮಂಡಲ ಪಂಚಾಯಿತಿಯಲ್ಲಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

2. ನಾನು 3 - 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರುವುದಿಲ್ಲ. ನಾನು ಸಹಿ ಮಾಡುತ್ತೇನೆ. ನನಗೆ ಓದಲು ಬರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ನನ್ನ ಹೆಸರಿಗಿರುವ ದಾಖಲಾತಿ ಹಾಜರು ಪಡಿಸಿರುತ್ತೇನೆ. ನಿಡಿ.1

ಮತ್ತು 2 ನಾವು ವಾಸವಾಗಿರುವ ಮನೆಯ ದಾಖಲಾತಿಯಾಗಿರುತ್ತದೆ ಎಂದರೆ ಸರಿ. ಆಸ್ತಿ ಸಂಃ 307/311 ಗ್ರಾಮ ಪಂಚಾಯಿತಿಯಾಗಿ ಬದಲಾವಣೆಯಾದ ನಂತರ 524/311 ಎಂದು ಹೊಸ ಆಸ್ತಿ ಸಂಃ ಕೊಡಲಾಗಿದೆ ಎಂದರೆ ಸರಿಯಲ್ಲ. ವಾದಿಗೆ ಪೂ – ಪಃ 40 ಅಡಿ, ಉ – ದಃ 50 ಅಡಿ ಇರುತ್ತದೆ ಎಂದೆರೆ ಸರಿಯಲ್ಲ. ಪೂರ್ವಕ್ಕೆಃ ಬೊಕ್ಕನ ಸಿದ್ದಯ್ಯನ ಮಾದಯ್ಯನ ಮನೆಗ, ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ದಾಸಯ್ಯನ ಹೊಂಬಾಳಮ್ಮ ಮತ್ತು ಕೆಂಚಯ್ಯನ ನಿವೇಶನ ಈ ಮಧ್ಯೆ ಇರುವ ಆಸ್ತಿಯು ವಾದಿಯ ನಿವೇಶನವಾಗಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೆಕ್ಕುಬಂದಿ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಸದರಿ ಚೆಕ್ಕುಬಂದಿ ಸ್ವತ್ತಿನಲ್ಲಿ ವಾದಿ ಹುಲ್ಲುಮೆದೆ ಮತ್ತು ಸೌದೆ ಹಾಕಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ವಾದಿಯ ಆಸ್ತಿಯ ಚೆಕ್ಕುಬಂದಿಯ ಆಸ್ತಿಯನ್ನು ನಮ್ಮ ಆಸ್ತಿಯೆಂದು ದಾಖಲಾತಿ ಸೃಷ್ಠಿ ಮಾಡಿ ಸುಳ್ಳು ಸಾಕ್ಷಿಃ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ನಾನು ಸುಮಾರು 15 ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿ ಸದಸ್ಯಳಾಗಿದ್ದೆ ಎಂದರೆ ಸರಿ. ನಿಡಿ.1 ಮತ್ತು 2 ರ ಆಸ್ತಿ ಪಂಚಾಯಿತಿ ಮುಖಾಂತರ ನನ್ನ ಗಂಡನಿಗೆ ಬಂದಿರುತ್ತದೆ. ನಿಡಿ.1 ಮತ್ತು 2 ರ ಆಸ್ತಿಯು ಪಂಚಾಯಿತಿಯಿಂದ ನಿವೇಶದ ಕೊಟ್ಟಾಗ 2 ನೇ ಪ್ರತಿವಾದಿಗೆ ಬಂದಿರುತ್ತದೆ. ಸದರಿ ಖಾಲಿ ನಿವೇಶನ 2 ನೇ ಪ್ರತಿವಾದಿಯಿಂದ ನನ್ನ ಹೆಸರಿಗೆ ಖಾತೆಯಾಗಿರುತ್ತದೆ. ಸದರಿ ಆಸ್ತಿಯ ಹಕ್ಕುಪತ್ರ ಇರುವುದಿಲ್ಲ. ನಾನು ಪಂಚಾಯಿತಿ ಸದಸ್ಯಳಾಗಿದ್ದಾಗ ವಾದಿ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಯನ್ನು ನಮ್ಮ ಹೆಸರಿಗೆ ಸೃಷ್ಠಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನನಗೆ ಒಬ್ಬ ಮಗ ಮತ್ತು ಮಗಳು ಇರುತ್ತಾರೆ. ನನ್ನ ಮಗಳ ಹೆಸರು ಅನುಶ್ರೀ. 2 ನೇ ಪ್ರತಿವಾದಿ ಹೆಸರಿಗೆ ಆಸ್ತಿ ಮಂಜೂರಾದ ಕುರಿತು ದಾಖಲಾತಿ ಹಾಜರು ಪಡಿಸಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ ಚೆಕ್ಕುಬಂದಿಯನ್ನು ನಿಡಿ.1 ರಲ್ಲಿ ಸೃಷ್ಠಿ ಮಾಡಿ ಬರೆಸಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ದಿಃ 22.02.2009 ರ ಸಾಮಾನ್ಯ ಸಭೆಯ ನಡವಳಿಯ ದಾಖಲಾತಿ ಹಾಜರು ಪಡಿಸಿಲ್ಲ. ದಿಃ 22.02.2009

ರಂದು ಯಾವುದೇ ಸಮಾನ್ಯ ಸಭೆಯ ನಡವಳಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ಆಸ್ತಿ ಚೆಕ್ಕುಬಂದಿ ಬರೆದಿಲ್ಲ ಎಂದರೆ ಸರಿ. ನಿಡಿ.2 ನ್ನು ನಾವೇ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ.3 ರ ಆಸ್ತಿಯು 2 ನೇ ಪ್ರತಿವಾದಿ ಹೆಸರಿಗೆ, ನಂತರ ನನ್ನ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.3 ರಲ್ಲಿ ನಮೂದು ಮಾಡಿದ ಎಂ ಆರ್ ನಂ.27/2009–10 ರ ಪ್ರತಿ ಹಾಜರು ಪಡಿಸಿಲ್ಲ. ಎಂ ಆರ್ ನಂ.27/2009–10 ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.4 ನ್ನು ಸೃಷಿ. ಮಾಡಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ.5 ಮತ್ತು 6 ರ ದಾಖಾಲಾತಿಗಳನ್ನು ಪಂಚಾಯಿತಿಯವರಿರು ವಾದಿ ಕೊಟ್ಟ ನೋಟೀಸಿಗೆ ಉತ್ತರವಾಗಿ ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ವಾದಿ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ಖಾತೆ ಸೃಷ್ಠಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಡಿ.7 ರಲ್ಲಿ ಯಾವ ಆಸ್ತಿಯ ನಂಬರ್ ನಮೂದು ಮಾಡಿರುವುದಿಲ್ಲ. ನಾವು ನಿಡಿ.7 ರ ನೋಟೀಸ್ ಪಡೆದುಕೊಂಡ ನಂತರ ಜಿ.ಪಿ.ಎಸ್ ಮಾಡಿಸಿರುತ್ತೇವೆ. ಜಿ.ಪಿ.ಎಸ್ ಮಾಡಿಸಿದರೆ ಆಸ್ತಿ ಎಲ್ಲಿ ಬರುತ್ತದೆ ಎಂದು ಗೊತ್ತಾಗುತ್ತದೆ ಎಂಬ ಕಾರಣದಿಂದ ಉದ್ದೇಶ ಪೂರ್ವಕವಾಗಿ ಜಿ.ಪಿ.ಎಸ್ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.8 ನ್ನು ಈ ದಾವೆಗೆ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ.8 ರಲ್ಲಿ ಆಸ್ತಿ ಸಂಖ್ಯೆ ಮತ್ತು ಚಕ್ಕುಬಂದಿ ನಮೂದಿಲ್ಲ ಎಂದರೆ ಸರಿ. ನಿಡಿ.9 ನ್ನು ನಾನು ಮತ್ತು ಗ್ರಾಮ ಪಂಚಾಯಿತಿಯವರು ಸೇರಿ ಸೃಷ್ಠಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿಡಿ.9 ನ್ನು ಈ ದಾವೆ ಸಲ್ಲಿಸಿದ ನಂತರ ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ಸಹ ವಾದಿಯ ಗೈರು ಹಾಜರಾತಿಯನ್ನು ದುರುಪಯೋಗ ಪಡಿಸಿಕೊಂಡು ದಾಖಲಾತಿ ಸೃಷ್ಠಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ವಾದಿಯ ಸ್ವಾಧೀನಕ್ಕೆ ನಾವು ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಮನೆ ಕಟ್ಟಲು ಹೋದಾಗ ವಾದಿ ತಡೆದಿರುತ್ತಾರೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳು ಗೊತ್ತಿರುತ್ತವೆ. ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದೇನೆಂದು ಬರೆಸಿರುತ್ತೇನೆ. ನನ್ನ

ಪ್ರತಿವಾದ ಪತ್ರದ ಸಂಗತಿಗಳು ಗೊತ್ತಿರುತ್ತವೆ. ನಾನು ದಾವಾ ಆಸ್ತಿ ಲಪಟಾಯಿಸಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಎಲ್ಲಾ ಸಂಗತಿಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಆಸ್ತಿ ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿಗೆ ಈ ವರ್ಷ ಕಂದಾಯ ಪಾವತಿ ಮಾಡಿರುತ್ತಾರೆಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ದಾವಾ ಆಸ್ತಿಯ ವಾದಿ ಸ್ವಾಧೀನಕ್ಕೆ ತೊಂದರೆ ಕೊಡಬಾರದೆಂದು ನನಗೆ ತಿಳಿ ಹೇಳಿರುತ್ತಾರೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ